# ಶೂನ್ಯ ಬಂಡವಾಳದಲ್ಲಿ ಐಟಿ ಭದ್ರತೆ



ಶೈಲೇಶ್ ಕುಮಾರ್ ದವೆ

ಕೃಷಿ ಹೊರತುಪಡಿಸಿದರೆ ದೇಶದಲ್ಲಿ ಅತಿ ಹೆಚ್ಚು ಜನರಿಗೆ ಉದ್ಯೋಗ ಒದಗಿಸಿರುವ ಕ್ಷೇತ್ರ ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಸ್‌ಎಂಬಿ) ಉದ್ಯಮ ವಲಯ. ಗುಂಡುಸೂಜಿಯಿಂದ ಹಿಡಿದು ವಿಮಾನದ ಬಿಡಿಭಾಗಗಳನ್ನೂ ಈ ವಲಯ ತಯಾರಿಸುತ್ತದೆ. ಇಂತಹ ಸಣ್ಣ ಉದ್ಯಮ ಸಂಸ್ಥೆಗಳಿಗೆ ಮತ್ತು ಸ್ಟಾರ್ಟ್ ಅಪ್ ಕಂಪೆನಿಗಳಿಗೆ ಐ.ಟಿ ಮೂಲ ಸೌಕರ್ಯ ಮತ್ತು ಭದ್ರತಾ ತಂತ್ರಾಂಶ ಗಳನ್ನು ಪೂರೈಸುವ ಕಂಪೆನಿಯೇ ಚೆನ್ನೈ ಮೂಲದ ಮ್ಯಾನೇಜ್ ಎಂಜಿನ್.

ಸ್ಟಾರ್ಟ್‌ಅಪ್ ಕಂಪೆನಿಗಳ ನಗರವಾಗಿ ಬೆಂಗಳೂರು ಪ್ರವರ್ಧಮಾನಕ್ಕೆ ಬರುತ್ತಿರುವ ಹಿನ್ನೆಲೆಯಲ್ಲಿ ಇತ್ತೀಚೆಗೆ 'ಮ್ಯಾನೇಜ್ ಎಂಜಿನ್' ನಗರದಲ್ಲಿ 'ಎಸ್‌ಎಂಬಿ'ಗಳ ಐ.ಟಿ ಭದ್ರತೆಗೆ ಸಂಬಂಧಿಸಿದಂತೆ ಒಂದು ದಿನದ ರಾಷ್ಟ್ರೀಯ ಸಮ್ಮೇಳನ ಏರ್ಪಡಿಸಿತ್ತು. ಈ ಸಮ್ಮೇಳನದಲ್ಲಿ 'ಶೂನ್ಯ ಬಂಡವಾಳದಲ್ಲಿ ಐ.ಟಿ ಮೂಲಸೌಕರ್ಯ' ಎಂಬ ಹೊಸ ಪರಿಕಲ್ಪನೆಯನ್ನು ಪರಿಚಯಿಸಿತು.

'ಶೂನ್ಯ ಬಂಡವಾಳ ಎಂದರೆ ಸಂಪೂರ್ಣ ಉಚಿತ ಎಂದರ್ಥವಲ್ಲ. ಚಿಕ್ಕ ಕಂಪೆನಿಗಳಿಗೆ ಅದರಲ್ಲೂ ಸ್ಟಾರ್ಟ್‌ಅಪ್ ಕಂಪೆನಿಗಳಿಗೆ ಮೊದಲ ಒಂದು ವರ್ಷ ಉಚಿತವಾಗಿ ಪ್ರಾಥಮಿಕ ಐ.ಟಿ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ವೆಬ್‌ಸೈಟ್ ನಿರ್ವಹಣೆ, ಪಿಸಿ ಮತ್ತು ಡೆಸ್ಕ್‌ಟಾಪ್ ಮ್ಯಾನೇಜ್‌ಮೆಂಟ್ ಸೌಲಭ್ಯ, ಹೆಲ್ಪ್‌ಡೆಸ್ಕ್, ಅಥವಾ ರೈಸ್ ಎ ಟಿಕೆಟ್‌ನಂತಹ ಸೌಲಭ್ಯಗಳನ್ನೂ ಇದು ಒಳಗೊಂಡಿದೆ. ವರ್ಷದ ಬಳಿಕ ಅಥವಾ ಕಂಪೆನಿಯ ವಹಿವಾಟು ವೃದ್ಧಿಸಿದಂತೆ ಹೆಚ್ಚಿನ ಭದ್ರತಾ ಸೌಲಭ್ಯ, ತಂತ್ರಾಂಶಗಳು ಬೇಕಿದ್ದರೆ ನಿಗದಿತ ಶುಲ್ಕ ನೀಡಿ ಸೇವೆ ವಿಸ್ತರಿಸಿಕೊಳ್ಳಬಹುದು' ಎಂದು ವಿವರಣೆ ನೀಡಿದರು ಕಂಪೆನಿಯ ಉಪಾಧ್ಯಕ್ಷ ಶೈಲೇಶ್ ಕುಮಾರ್ ದವೆ.

ಸಣ್ಣ ಕಂಪೆನಿಗಳಲ್ಲಿ ಬೆರಳೆಣಿಕೆಯ ಸಿಬ್ಬಂದಿ ಇರುತ್ತಾರೆ. ಹೆಚ್ಚೆಂದರೆ ನಾಲ್ಕೈದು ಗಣಕಯಂತ್ರಗಳು. ಅಂತರ್ಜಾಲ ಸಂಪರ್ಕ ಇವಿಷ್ಟೇ ಅಲ್ಲಿನ ಐ.ಟಿ ಮೂಲಸೌಕರ್ಯ ವ್ಯವಸ್ಥೆ. ದುಬಾರಿ ಮೊತ್ತಕ್ಕೆ ಭದ್ರತಾ ಸಾಫ್ಟ್‌ವೇರ್‌ಗಳನ್ನು ಖರೀದಿಸುವ ಸಾಮರ್ಥ್ಯ ಇಂತಹ ಘಟಕಗಳಿಗೆ ಇರುವುದಿಲ್ಲ. ಉದಾಹರಣೆಗೆ ದೇಶದಲ್ಲಿ ಕೇವಲ 20 ಲಕ್ಷ ಸಣ್ಣ ಕಂಪೆನಿಗಳು ಮಾತ್ರ ಅಂತರ್ಜಾಲ ಸಂಪರ್ಕ ಪಡೆದುಕೊಂಡಿವೆ. ಇದರಲ್ಲಿ ಕೇವಲ 5 ಲಕ್ಷ ಕಂಪೆನಿಗಳು ಮಾತ್ರ ಸ್ವಂತ ವೆಬ್‌ಸೈಟ್ ಹೊಂದಿವೆ. ಇಂತಹ ಕಂಪೆನಿಗಳೇ ನಮ್ಮ ಪ್ರಮುಖ ಗ್ರಾಹಕರು' ಎನ್ನುತ್ತಾರೆ ದವೆ.

ಸಣ್ಣ ಕಂಪೆನಿಗಳಿಗೆ ತಾಂತ್ರಿಕವಾಗಿ ಅಪ್‌ಗ್ರೇಡ್ ಆಗಲು ಮ್ಯಾನೇಜ್ ಎಂಜಿನ್ ಕೆಲವು ಸೇವೆಗಳನ್ನು ಒದಗಿಸುತ್ತದೆ. ಇದರಲ್ಲಿ ಹೆಚ್ಚಿನವು ಕ್ಲೌಡ್ ಕಂಪ್ಯೂಟಿಂಗ್ ಆಧರಿಸಿದ 24 7 ಮಾದರಿ ಸೌಲಭ್ಯಗಳು. ಇದರ ಜತೆಗೆ ವಿಂಡೋಸ್, ಐಟಿ ಯುಟಿಲಿಟಿ, ವಿಷುವಲೈಸೇಷನ್ , ಕ್ಲೌಡ್ ಮಾನಿಟರಿಂಗ್‌ಗಾಗಿ ಕಂಪೆನಿ 51ಕ್ಕೂ ಹೆಚ್ಚು ಬಗೆಯ ಉಚಿತ ಟೂಲ್‌ಗಳನ್ನು ಪರಿಚಯಿಸಿದೆ. ಸಮ್ಮೇಳನದಲ್ಲಿ ಇದರ ಪ್ರಾತ್ಯಕ್ಷಿಕೆ ನಡೆಯಿತು.

❖